**ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರ ಕಛೇರಿ,**
**ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.**
(ಕಛೇರಿ:08262-234904 ಫ್ಯಾಕ್ಸ್:08262-230032 ಇ-ಮೇಲ್:dcfbhadra@yahoo.com)

ಸಂಖ್ಯೆ:ಎ5/ಭೂಮಿ/ಸಿಆರ್-9/2008-09 1337 ದಿನಾಂಕ:27-05-2020.

**ಇವರಿಗೆ,**

ಕುಲಸಚಿವರು,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ-577451,
ಶಿವಮೊಗ್ಗ ಜಿಲ್ಲೆ.

**ವಿಷಯ:** ಕುವೆಂಪು ವಿಶ್ವವಿದ್ಯಾನಿಲಯಕ್ಕೆ ನೀಡಿರುವ 230 ಎಕರೆ ಜಮೀನಿನ ಗುತ್ತಿಗೆ ನವೀಕರಣದ ಬಗ್ಗೆ.

**ಉಲ್ಲೇಖ:**
1. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಕಛೇರಿ ಆದೇಶ ಸಂಖ್ಯೆ:ಎಂ4/ ಎಲ್ಎನ್‌ಡಿ/ ಸಿಆರ್-195/2007-08, ದಿನಾಂಕ:26-05-2009.
2. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಕಛೇರಿ ಆದೇಶ ಸಂಖ್ಯೆ:ಎಂ4/ ಎಲ್ಎನ್‌ಡಿ/ ಸಿಆರ್-195/2007-08, ದಿನಾಂಕ:29-03-2019.
3. ವಲಯ ಅರಣ್ಯಾಧಿಕಾರಿ, ಭದ್ರಾ ವನ್ಯಜೀವಿ ವಲಯ, ತಣಿಗೆಬೈಲು ಇವರ ಪತ್ರ ಸಂಖ್ಯೆ:284/2019-20, ದಿನಾಂಕ:02-08-2019.
4. ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ರವರ ಪತ್ರ ಸಂಖ್ಯೆ:ಬಿ4/ಲ್ಯಾಂಡ್/ಜಿಎಲ್-159/2014-15,ದಿ:19-08-2019
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ರವರ ಪತ್ರ ಸಂಖ್ಯೆ:ಬಿ2/ಭೂಮಿ/ಜಿಎಲ್-4357/2019-20, ದಿನಾಂಕ:23-08-2019.
6. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 14-11-2019.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ 230 ಎಕರೆ ಅರಣ್ಯ ಪ್ರದೇಶವನ್ನು ಗುತ್ತಿಗೆ ನೀಡಿದ್ದು, ಗುತ್ತಿಗೆ ಅವಧಿಯು ದಿನಾಂಕ:20-02-1999 ಕ್ಕೆ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕುವೆಂಪು ವಿಶ್ವವಿದ್ಯಾನಿಲಯಕ್ಕೆ ನೀಡಿದ 230 ಎಕರೆ ಅರಣ್ಯ ಪ್ರದೇಶದ ಬದಲಿಗೆ ಉಲ್ಲೇಖಿತ (2) ರ ಪತ್ರದಲ್ಲಿ 648.38 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿ ಆದೇಶ ನೀಡಿರುತ್ತಾರೆ. ಅಲ್ಲದೆ ತಹಸೀಲ್ದಾರ್, ಚಿಕ್ಕಮಗಳೂರು ಇವರಿಗೆ ಮೇಲ್ಕಂಡ ಸರ್ವೆ ನಂ. ಪಹಣಿಯಲ್ಲಿ ಲ್ಯಾಂಡ್ ಬ್ಯಾಂಕ್ ಎಂದು ನಮೂದಿಸಿರುವ ವಿಸ್ತೀರ್ಣವನ್ನು ಅರಣ್ಯ ಇಲಾಖೆ ಎಂದು ಬದಲಾವಣೆ ಮಾಡಿ ಪಹಣಿ ಇಂಡೀಕರಿಸಿ ದಾಖಲಿಸಲು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ಸೂಚಿಸಿರುತ್ತಾರೆ.

ಅದರಂತೆ ಉಲ್ಲೇಖಿತ (6) ರ ಪತ್ರದಲ್ಲಿ ಅರಣ್ಯ ಇಲಾಖೆಗೆ ನೀಡಿರುವ ಜಾಗವನ್ನು ನಕಾಶೆಯಲ್ಲಿ ಗುರುತಿಸಿ ಸದರಿ ಪ್ರದೇಶವನ್ನು ಅರಣ್ಯವೆಂದು ಇಂಡೀಕರಿಸಲು ಕ್ರಮಕೈಗೊಳ್ಳುವಂತೆ ನಿಮಗೆ ತಿಳಿಸಲಾಗಿತ್ತು. ಆನ್‌ಲೈನ್ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ ಬಿಡುಗಡೆಯಾದ 648.38 ಎಕರೆ ಜಮೀನನ್ನು Village Map, Topo Sheet, KML

format ನಲ್ಲಿ ನಕಾಶೆಯನ್ನು ಅಪ್‌ಲೋಡ್ ಮಾಡದೇ ಇರುವುದರಿಂದ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ 648.38 ಎಕರೆ ಜಮೀನನ್ನು ಮೋಜಣಿ ಮಾಡಿಸಿ ಇಂಡೀಕರಣಗೊಳಿಸಿ ನಕಾಶೆ ಹಾಗೂ ಪಹಣಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಿದೆ. ನಂತರ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಕ್ರಮಕೈಗೊಳ್ಳಲಾಗುವುದು.

ನಿಮ್ಮ ವಿಶ್ವಾಸಿ,

ಸಹಿ/-

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

<u>ಪ್ರತಿಯನ್ನು:-</u>

1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಹುಲಿಯೋಜನೆ), ಮೈಸೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾ ವನ್ಯಜೀವಿ ಉಪವಿಭಾಗ, ಲಕ್ಕವಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
8) ವಲಯ ಅರಣ್ಯಾಧಿಕಾರಿ, ಭದ್ರಾ ವನ್ಯಜೀವಿ ವಲಯ, ಲಕ್ಕವಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

ರವಾನಿಸಲಾಗಿದೆ
ದಿನಾಂಕ 27/05/2020

ಕೆ/ಪ್ರ.

A5/2020-21/Kuvempu University letr